ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಎದುರುದಾರರ ಪರ ವಕೀಲರಿಂದಃ-

ನಾನು 2019ರಲ್ಲಿ ಬಿಳಗುಂಬ ಗ್ರಾಮ ಪಂಚಾಯಿತಿಯ ಅಧ್ಯಕ್ಷನಾಗಿದ್ದೆ. ನಾನು 10 ವರ್ಷಗಳ ಕಾಲ ಗ್ರಾಮ ಪಂಚಾಯಿತಿಯ ಅಧ್ಯಕ್ಷನಾಗಿದ್ದೆ.

ನಿಪಿ-7ನ್ನು ಸಾಕ್ಷಿಗೆ ತೋರಿಸಿ ಇದಂತರೆ ನಿಮಗೆ ಮತ್ತು ಎದುರುದಾರರ ನಡುವೆ ದಿನಾಂಕ 21.06.2004ರಂದು ಕರಾರು ಪತ್ರವಾಗಿದ್ದು ಅದರಲ್ಲಿ ನಿಮ್ಮ ಸಹಿ ಇದೆ ಎಂದರೆ ಸರಿ. ನನ್ನ ಸಹಿಗಳು ನಿಪಿ-7(ಜೆ) (ಕೆ) (ಎಲ್) ಎಂದು ಗುರುತಿಸಲಾಗಿದೆ. ನಾನು ಸಬ್ ರಿಜಿಸ್ಟ್ರಾರ್ ಕಛೇರಿ ಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ-7ರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿದೆ ಎಂದರೆ ಸರಿ. 4 ಲಕ್ಷ ಹಣವನ್ನು ನನಗೆ ಜಮಾ ಮಾಡಿದ್ದಾರೆ ಎಂದು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ 6ನೇ ಪುಟದಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿ.

ಕರಾರು ಪತ್ರದ ಪ್ರಕಾರ ನಾನು ಚಿಕ್ಕೇಗೌಡ ಅಥವಾ ಅವರ ಮಗನಿಗೆ ನೋಟಿಸು ನೀಡಿಲ್ಲ. ಕರಾರು ಪತ್ರದ ಪ್ರಕಾರ 12 ಲಕ್ಷ 75 ಸಾವಿರಕ್ಕೆ ನಿಷ್ಕರ್ಷೆಯಾಗಿದ್ದು ನನಗೆ ಮುಂಗಡವಾಗಿ 12 ಲಕ್ಷ ಹಣವನ್ನು ನೀಡಿರುತ್ತಾರೆ ಎಂದು ಬರೆಯಾಲಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ 8 ಲಕ್ಷ ಮಾತ್ರ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-7ರ ಪ್ರತಿ ನನ್ನ ಕಡೆ ಇದೆ. ಕರಾರು ಪತ್ರದಲ್ಲಿ 12 ಲಕ್ಷ ಎಂದು ಬರೆದಿದ್ದು ನನಗೆ ಕೇವಲ 8 ಲಕ್ಷ ಮಾತ್ರ ಮುಂಗಡ ಹಣವನ್ನು ಕೊಡಲಾಗಿದೆ ಎಂದು ಪ್ರತಿವಾದಿಗೆ ನೋಟಿಸನ್ನು ಲಿಖಿತ ಮೂಲಕ ನೀಡಿಲ್ಲ.

ಕರಾರು ಪತ್ರದಲ್ಲಿ ನಮೂದಿಸಿರುವ ವಿಳಾಸದಲ್ಲೆ ನಾವು 4 ಜನರು ಅಂದಿನಿಂದ ಇಂದಿನವರೆಗೂ ವಾಸ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಈ ದಾವೆ ಸಲ್ಲಿಸುವ ಮೊದಲ ನಿಪಿ-7 ಮತ್ತು ನಿಪಿ-10ರ ಪ್ರಕಾರ ನನಗೆ ನೋಟಿಸು ನೀಡಲಾಗಿತ್ತು ಎಂದರೆ ಸರಿ. ನೋಟಿಸಿಗೆ ನೀವು ಉತ್ತರ ನೀಡಿರುತ್ತೀರಾ ಎಂದರೆ ಸಾಕ್ಷಿ ನಮ್ಮ ವಕೀಲರು ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ಉತ್ತರ ಕೊಟ್ಟ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಆ ರೀತಿಯ ಉತ್ತರ ನೀಡಿರುವುದಿಲ್ಲ, ನೀಡಿದ್ದರೆ ದಾಖಲೆ ಹಾಜರುಪಡಿಸುತ್ತಿದ್ದೀರಿ ಎಂದರೆ ಸರಿಯಲ್ಲ.

ನೋಟಿಸು ಎಲ್ಲರಿಗೂ ಜಾರಿಯಾದ ನಂತರವೇ ಓ.ಎಸ್ 676/2006 ದಾವೆ ಹಾಕಲಾಗಿತ್ತು ಎಂದರೆ ಸರಿ. ಅಸಲು ದಾವೆಯಲ್ಲಿ ನಮಗೆ ಮತ್ತ ಇತರೆ ಪ್ರತಿವಾದಿಗಳಿಗೂ ಸಹ ದಿನಾಂಕ 07.02.2007ಕ್ಕೂ ಮೊದಲೇ ಸಮನ್ಸ್ ಜಾರಿಯಾಗಿದೆ ಎಂದರೆ ಸರಿ. ದಿನಾಂಕ 07.02.2007ರಂದು ನಾನ ವಕೀಲರನ್ನು ನೇಮಕಮಾಡಿ ವಕಲಾತ್ತು ಸಲ್ಲಿಸಿರುತ್ತೇನೆ ಎಂದರೆ ಸರಿ. ದಿನಾಂಕ 16.03.2007ರಂದು ನಾನು ಪ್ರತಿವಾದಿ ಪತ್ರ ಸಲ್ಲಿಸಲು ಸಮಯ ಕೋರಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ದಿನಾಂಕ 05.04.2008ರಂದು ನನ್ನ ಮತ್ತು ವಾದಿ ಸಮಕ್ಷಮದಲ್ಲಿ ರಾಜಿ ಮಾಡಿಕೊಳ್ಳಲು ಮಧ್ಯಸ್ಥಿಕೆ ಕೇಂದ್ರ ಕಳುಹಿಸಿಕೊಡಿ ಎಂದು ನಾನು ಕೇಳಿರುತ್ತೇನೆ ಮತ್ತು ನಾನು ಹಾಜರಿದ್ದೆನು ಎಂದರೆ ಸರಿ. ಅಸಲು ದಾವೆ ದಿನಾಂಕ 17.12.2008ರಂದು ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಮುಂದುವರೆದ ಸಾಕ್ಷಿಯು ಡಿಕ್ರಿಯಾದ ವಿಚಾರ ನನಗೆ ಗೊತ್ತಿರಲಿಲ್ಲ. ಅಸಲು ದಾವೆ ಏನು ಆಗಿರುತ್ತದೆ ಎಂದು ನಾನು ಖುದ್ದು ಬಂದು ನ್ಯಾಯಾಲಯದಲ್ಲಿ ಪರಿಶೀಲನೆ ಮಾಡಿಲ್ಲ ಆದರೆ ವಕೀಲರ ಮೂಲಕ ತಿಳಿದುಕೊಳ್ಳುತ್ತಿದ್ದೆ. ನನಗೆ ವಕೀಲರು ಆಗಾಗ ಕೇಸು ಏನಾಗಿದೆ ಫೋನಿನ ಮೂಲಕ ಮುದಿನ

ದಿನಾಂಕಗಳನ್ನು ತಿಳಿಸುತಿದ್ದರು. ಕೇಸು ಏನಾಗಿದೆ ಎಂದು ತಿಳಿದುಕೊಳ್ಳಲು ನಾನಾಗಲೀ ಅಥವಾ ಇತರೆ ಅರ್ಜಿದಾರರಾಗಿಲಿ ಕೂತುಹಲು ಇರಲಿಲ್ಲವಾ ಎಂದರೆ ಸಾಕ್ಷಿ ಇರಲಿಲ್ಲ ಎಂದು ನುಡಿಯುತ್ತಾರೆ.

ದಿನಾಂಕ 17.12.2008ರಂದು ಅಸಲು ದಾವೆ ಡಿಕ್ರಿಯಾದ ನಂತರ ಜಾರಿ ಅರ್ಜಿ 98/2009ರಂತೆ ಅರ್ಜಿ ಹಾಕಲಾಯಿತು ಎಂದರೆ ಸರಿ. ಅವಲುಜಾರಿಯಲ್ಲೂ ಸಹ ಇದೇ ವಿಳಾಸಕ್ಕೆ ನನಗೆ ಮತ್ತು ಇತರೆ ಅರ್ಜಿದಾರರಿಗೆ ನೋಟಿಸು ಜಾರಿಯಾಗಿದೆ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅಮಲುಜಾರಿ ಜಾರಿಯ ಅರ್ಜಿಯ ಆದೇಶ ಪುಟವನ್ನು ಸಾಕ್ಷಿ ತೋರಿಸಲಾಗಿ ಇದರ ಪ್ರಕಾರ ನನಗೆ ಮತ್ತು ಇತರೆ ಅರ್ಜಿದಾರರಿಗೆ ನೋಟಿಸು ಜಾರಿಯಾಗಿದೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಇದರಲ್ಲಿ ಬರೆದಿರಬಹುದು ಆದರೆ ನನಗೆ ಜಾರಿಯಾಗಿಲ್ಲ ಎಂದು ನುಡಿಯುತ್ತಾರೆ. ಮೇಲೆ ಹೇಳಿದಂತೆ ನನಗೆ ನೋಟಿಸು ಜಾರಿಯಾಗಿಲ್ಲ ಎಂದು ತಕಾರನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ದಿನಾಂಕ 04.10.2009ರಂದು ನೀವು ವಕೀಲರಾದ ಶ್ರೀ ಬಿ.ಕೆ. ಧನಂಜಯ್ಯರವರ ಕಡೆಯಿಂದ ವಕಾಲತ್ ಹಾಕಿಸಿ ರುತ್ತೀರಾ ಎಂದರೆ ಸಾಕ್ಷಿ ನಾನು ವಕಾಲತ್ ಹಾಕಿಲ್ಲ ನನ್ನ ಕಡೆಯಿಂದ 3-4 ವಕಲಾತ್ತಿಗೆ ವಕೀಲರು ಮೊದಲೇ ಸಹಿ ಮಾಡಿಸಿಕೊಂಡಿದ್ದರು, ಹಾಗಾಗಿ ಅವರು ಹಾಕಿರಬಹುದು ಎಂದು ನುಡಿಯುತ್ತಾರೆ. ಅಮಲುಜಾರಿ ಅರ್ಜಿಯ ಆದೇಶ ಪುಟ ಕಳೆದುಹೋದ ವಿಚಾರವಾಗಿ ಮಾನ್ಯ ಉಚ್ಛ ನ್ಯಾಯಾಲಯದಿಂದ ಆದೇಶ ಪುಟವನ್ನು ರಿಕನ್ಸ್ರಕ್ಟ್ ಮಾಡಿ ಪುನಃ ಕೋರ್ಟ್ ನೋಟಿಸನು ಉಭಯ ಪಕ್ಷಗಾರರಿಗೆ ಕಳುಹಿಸಿಎಂದು ಬಂದ ಆದೇಶದ ಮೇರೆಗೆ ದಿನಾಂಕ 19.11.2011ರಂದು ಪುನಃ ನೋಟಿಸು ಜಾರಿಯಾಗಿದೆ ಎಂದರೆ ಸಾಕ್ಷಿ ನನಗೆ ನೋಟಿಸ ಬಂದಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 19.11.2011ರಂದು ಸಹ

ನನಗೆ ನೋಟಿಸುಜಾರಿಯಗಿದೆ ಎಂದು ಬರೆದಿರುವುದು ತಪ್ಪು ಎಂದು ನಾನು ಯಾವುದೇ ನೋಟಿಸು ಅಥವಾ ಅರ್ಜಿಯನ್ನು ಸಲ್ಲಿಸಿಲ್ಲ. ಬೇರೆ ಅರ್ಜಿದಾರರು ನನಗೆ ಲಿಖಿತವಾಗಿ ನನಗೆ ಯಾವುದೇ ಸಮ್ಮತಿ ಪತ್ರ ನೀಡಿಲ್ಲ ಎಂದರೆ ಸಾಕ್ಷಿ ನೀಡಿದ್ದಾರೆ ಅದು ನಮ್ಮ ವಕೀಲರಿಗೆ ನೀಡಿರುತ್ತೇನೆ.

ನಮ್ಮ ವಕೀಲರಾ ಶ್ರೀ ಬಿ.ಕೆ ಧನಂಜಯ್ಯರವರ ವಿರುದ್ಧ ವಕೀಲರ ಕಮಿಟಿಗೆ ನಾನು ಒಬ್ಬನೇ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಹೆಸರು ಮಾತ್ರ ಇದೆ ಎಂದು ನುಡಿಯುತ್ತಾರೆ, ಉಳಿದ ಅರ್ಜಿದಾರರ ಕಮಿಟಿ ಮುಂದೆ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ಕಂಪ್ಲೆಂಟ್-ಗೆ ನಾನು ಮಾತ್ರ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಕೊಟ್ಟ ದೂರಿನಂತೆ ವಕೀಲರು ವಕೀಲರ ವೃತ್ತಿಯಿಂದ ಸಸ್ಪೆಂಡ್ ಮಾಡಲಾಗಿತ್ತು. ಸದರಿ ಆದೇಶದ ವೇಲೆ ಸಿವಿಲ್ ಅಪೀಲ್ ನಂ 1161/2023ರಂತೆ ಮಾನ್ಯ ಸರ್ವೋಚ್ಛ ನ್ಯಾಯಾಲಯಕ್ಕೆ ವಕೀಲರು ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಆ ಮೇಲ್ಮನವಿಯಲ್ಲಿ ನಾನು ಹಿಯರ ವಕೀಲರ ನೇಮಕ ಮಾಡಿಕೊಂಡಿದ್ದೆನು ಎಂದರೆ ಸರಿ. ದಿನಾಂಕ 22.03.2024ರಂದು ಬಾರ್ ಕನ್ಸಲ್ ನ ಆದೇಶವನ್ನು ರದ್ದುಪಡಿಸಲಾಗಿದೆ ಎಂದರೆ ಸರಿ. ಸದರಿ ಆದೇಶದ ಪ್ರತಿಯನ್ನು ನೋಡಿ ಒಪ್ಪಿಕೊಂಡ ಕಾರಣ ಸದರಿ ಆದೇಶದ ಪ್ರತಿಯನ್ನು ನಿಆರ್-13 ಎಂದು ಗುರುತಿಸಲಾಯಿತು. ದಿನಾಂಕ 22.04.2025ರಂದು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ ಅದರಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ. ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದಲ್ಲಿ ನಮಗೆ 12 ಲಕ್ಷ ಹಣವನ್ನು ಮೊದಲೇ ಪಡೆದುಕೊಂಡಿದ್ದರಿಂದ ಮತ್ತು ಕೇವಲ 75 ಸಾವಿರ ಬರಬೇಕಾದುದರಿಂದ ನಾವು ನಿರ್ಲಕ್ಷ ಮಾಡಿ ಕೇಸಿನಲ್ಲಿ ಸಕ್ರಿಯವಾಗಿ ಭಾಗವಹಿದೇ ಡಿಕ್ರಿಯಾಗಿದೆ ಎಂದು ಅಬಸರ್ವೇಷನ್ ವಹಿಸಲಾಗಿದೆ ಎಂದರೆ

ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಕಲಿತವು ಮತ್ತು ತಿಳಿದನಾಗಿದ್ದು ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷನಾಗಿದ್ದುದರಿಂದ ನನಗೆ ಪ್ರಪಂಚದ ಜ್ಞಾನ ಇಲ್ಲ ಎಂದು ಪರಿಗಣಿಸಲು ಆಗುವುದಿಲ್ಲ ಪುಟ 7 ಪ್ಯಾರಾ 2 ರಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಬರೆದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ವಕೀಲರು ಸರಿಯಾಗಿ ಕೇಸು ನಡೆಸುತ್ತಿಲ್ಲ ಎಂದು ಸದರಿ ವಕೀಲರಿಂದ ನೋ ಅಬಜೆಕ್ಷನ್ ತೆಗೆದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಡಿಕ್ರಿಯಾದ ನಂತರ ತೆಗೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಯಾವ ದಿನಾಂಕ ತೆಗೆದುಕೊಂಡಿದ್ದೆವು ಎಂದು ನನಗೆ ಗೊತ್ತಿಲ್ಲ. ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ಕೇಸು ಏನಾಗಿದೆ ಎಂದು ನಿಮ್ಮ ವಕೀಲರ ಮೂಲಕ ತಿಳಿದುಕೊಂಡಿರುತ್ತೀರಾ ಎಂದರೆ ಹೌದು ವಕೀಲರು ಡಿಸ್ಮಿಸ್ ಆಗಿದೆ ಎಂದು ತಿಳಿಸಿರುತ್ತಾರೆ. ಆದೇಶ ವಕೀಲರ ಪರವಾಗಿ ಆಗಿರುತ್ತದೆ. ಮಾನ್ಯ ಸರ್ವೋಚ್ಛ ನ್ಯಾಯಾಲಯ ಆದೇಶವಾದ 2-3 ತಿಂಗಳ ನಂತರ ವಿಚಾರ ತಿಳಿಯುತ್ತಾರೆ. ನಾನು ಉದ್ದೇಶಪೂರ್ವಕವಾಗಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಬಗ್ಗೆ ಪ್ರಸ್ತುತ ಅರ್ಜಿಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ನೀವು ಮಾತ್ರ ಬಾರ್ ಕೌನ್ಸಿಲ್ ಗೆ ದೂರು ನೀಡಿದ್ದೀರಾ ಇತರ ಅರ್ಜಿದಾರರು ಪ್ರಸ್ತುತ ಅರ್ಜಿಯನ್ನು ಮೊದಲೇ ಹಾಕಬೇಕಾಗಿತ್ತು ಎಂದರೆ ಸಾಕ್ಷಿ ನಮ್ಮ ತಾಯಿಗೆ ಓಡಾಡಲು ಆಗುವುದಿಲ್ಲ ನಂತರದಲ್ಲಿ ನಾನು ಹಾಕಿರುತ್ತೇನೆ.

ಅಮಲುಜಾರಿ ಅರ್ಜಿಯಲ್ಲಿ ದಿನಾಂಕ 23.09.2012ರಂದು ನ್ಯಾಯಾಲಯದದ ಮೂಲಕ ಸೇಲ್ ಡೀಡ್ ಬರೆದುಕೊಡಲಾಯಿತು ಅದು

ನಿಪಿ-14 ಆಗಿರುತ್ತದೆ. ನಂತರ ದಿನಾಂಕ 08.11.2012ರಲ್ಲಿ ಸ್ವತ್ತಿನ ಸ್ವಾಧೀನವನ್ನು ನ್ಯಾಯಾಲಯದ ಅಮೀನಾರವರ ಕಡೆಯಿಂದ ಕೂಡಿಸಲಾಗಿದೆ ಎಂದರೆ ಸರಿ. ನಂತರದಲ್ಲಿ ಎದುರುದಾರರ ಹೆಸರಿಗೆ ನಿಪಿ-11 ಮತ್ತು ನಿಪಿ-12ರಂತೆ ರೆವಿನ್ಯೂ ದಾಖಲೆಗಳು ಆಗಿರುತ್ತವೆ ಎಂದರೆ ಸರಿ. ಕಳೆದ 13 ವರ್ಷಗಳಿಂದ ಎದುರುದಾರರೇ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ನನಗೆ ಈ ಅರ್ಜಿ ಸಲ್ಲಿಸಲು ಸಾಕಷ್ಟು ಸಕಾರಣಗಳು ಇರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.